**ಸಾಕ್ಷಿಯನ್ನು ದಿಃ *18/09/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ.**

ನಾನು ಐಟಿಐ ವರೆಗೆ ಓದಿರುತ್ತೇನೆ. ನಾನು ಕಿರಾಣಿ ಅಂಗಡಿ ಮತ್ತು ಪಾನಶಾಪ ನಡೆಸುತ್ತೇನೆ. ನನ್ನ ಸ್ವಂತ ಊರು ಹುಬ್ಬಳ್ಳಿ. ನನಗೆ ಸ್ವಂತ ಮನೆ ಇದೆ. ನನಗೆ ತಿಂಗಳಿಗೆ 80 ಸಾವಿರ ರೂಪಾಯಿಗಳಿಂದ ಒಂದು ಲಕ್ಷದವರೆಗೆ ವ್ಯಾಪಾರ ಆಗುತ್ತದೆ. ನಮ್ಮದು ಒಟ್ಟು ಕುಟುಂಬವಿದ್ದು, ನಮ್ಮ ಕುಟುಂಬದ ಜೊತೆಗೆ ನನ್ನ ತಾಯಿ ಮತ್ತು ತಮ್ಮ ಸಹ ವಾಸವಿರುತ್ತಾರೆ. ನಮ್ಮ ಮನೆತನದ ಎಲ್ಲ ಖರ್ಚು ವೆಚ್ಚಗಳನ್ನು ನಾನು ಮತ್ತು ನನ್ನ ತಮ್ಮ ನೋಡಿಕೊಳ್ಳುತ್ತೇವೆ. ನನ್ನ ಮನೆಯ ಮೇಲೆ ಸಾಲ ಮತ್ತ ಎಲ್ಲ ಖರ್ಚು ಕೂಡಿ ತಿಂಗಳಿಗೆ 40 ಸಾವಿರ ರೂಪಾಯಿ ಖರ್ಚಾಗುತ್ತದೆ. ಸದರಿ ಅಂಗಡಿಗಳನ್ನು ಹೊರತುಪಡಿಸಿ ಬೇರೆ ಮೂಲದಿಂದ ಆದಾಯವಿಲ್ಲ ಎಂದರೆ ನಿಜ.

ಆರೋಪಿತರು ನನಗೆ ಪರಿಚಯವಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ತಮ್ಮನ ಸ್ನೇಹಿತ ಎಂದು ಉತ್ತರಿಸುತ್ತಾರೆ. ಆರೋಪಿತರು 2015 ನೇ ಇಸ್ವಿಯಿಂದ ಪರಿಚಯ. ಈ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ರಸ್ತೆ ಮೇಲೆ ಇರುವ ಅಂಗಡಿಯಲ್ಲಿ ಸಣ್ಣ ವ್ಯಾಪಾರ ಮಾಡುತ್ತಾನೆ. ಆರೋಪಿ ಮತ್ತು ನನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ.

ಸೈಫಅಲಿ ಬಾಂಬೆವಾಲೆ ನನ್ನ ತಮ್ಮ. 2015 ರಲ್ಲಿ ಆರೋಪಿತರು ಒಂದು ಹೋಟೇಲ ನಡೆಸುತ್ತಿದ್ದರು ಎಂದರೆ ನಿಜ. ಆರೋಪಿತರು ಮತ್ತು ನನ್ನ ತಮ್ಮ ಇಬ್ಬರೂ ಸೇರಿ ಹೋಟೇಲನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರಿಬ್ಬರೂ ಒಳ್ಳೆಯ ಸ್ನೇಹಿತರು ಎಂದರೆ ನಿಜ. ಆರೋಪಿತರ ವ್ಯವಹಾರಗಳ ಕುರಿತು ನನ್ನ ತಮ್ಮನಿಗೆ ಎಲ್ಲ ವಿಷಯ ಗೊತ್ತಿತ್ತು ಎಂದರೆ ನಿಜ. ಆರೋಪಿತರ ಬ್ಯಾಂಕ ವ್ಯವಹಾರವನ್ನು ಸಹ ನನ್ನ ತಮ್ಮ ನೋಡಿಕೊಳ್ಳುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಆರೋಪಿತರಿಗೆ ಒಳ್ಳೆಯ ಆದಾಯವಿತ್ತು ಎಂದರೆ ನಿಜ. ಆರೋಪಿತರ ಬ್ಯಾಂಕಿನ ಚೆಕ್ಕಗಳ ಕುರಿತು ನನ್ನ ತಮ್ಮನಿಗೆ ಗೊತ್ತಿತ್ತು ಎಂದರೆ ನಿಜ. ಸ್ವಲ್ಪ ದಿನಗಳ ನಂತರ ನನ್ನ ತಮ್ಮನಿಗೆ ಮತ್ತು ಆರೋಪಿತರಿಗೆ ವೈಮನಸ್ಸು ಆಯಿತು ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ಇರುವಾಗ ಆರೋಪಿತರು ತನ್ನ

ಮೋಟಾರುಸೈಕಲನಲ್ಲಿ ಇಟ್ಟಂತಹ ಖಾಲಿ ಚೆಕ್ಕುಗಳನ್ನು ನನ್ನ ತಮ್ಮ ತೆಗೆದುಕೊಂಡಿದ್ದಾನೆ ಎಂದರೆ ನನಗೆ ಗೊತ್ತಿಲ್ಲ.

2017 ನೇ ಇಸ್ವಿಯಲ್ಲಿ ನನ್ನ ತಮ್ಮನ ಮೇಲೆ ಒಂದು ಕ್ರಿಮಿನಲ ಪ್ರಕರಣ ಆಗಿತ್ತು ಎಂದರೆ ಇರಬಹುದು. ಈ ಪ್ರಕರಣದಲ್ಲಿರುವಂತ ಚೆಕ್ಕು ನನ್ನ ತಮ್ಮ ನನಗೆ ಕೊಟ್ಟ ಚೆಕ್ಕು ಎಂದರೆ ಸಾಕ್ಷಿದಾರರು ಆರೋಪಿಯಾದ ಆಸೀಫ್ ಕೊಟ್ಟಿದ್ದು ಇರುತ್ತದೆ ಎಂದು ಹೇಳುತ್ತಾರೆ. ನನ್ನ ತಮ್ಮ ಅವರ ಮೇಲಿರುವ ಕ್ರಿಮಿನಲ ಪ್ರಕರಣದಲ್ಲಿ ನ್ಯಾಯಾಂಗ ಬಂಧನಕ್ಕೆ ಒಳಪಟ್ಟಾಗ ಈ ಪ್ರಕರಣದ ಚೆಕ್ಕು ನನಗೆ ಕೊಟ್ಟಿರುತ್ತಾರೆ ಎಂದರೆ ಸುಳ್ಳು.

ನಾನು ಆರೋಪಿತರಿಗೆ 2018 ನೇ ಇಸ್ವಿಯಲ್ಲಿ ಸಾಲ ಕೊಟ್ಟಿದ್ದೇನೆ, ಆದರೆ ಖಚಿತವಾದ ದಿನಾಂಕ ಮತ್ತು ಮಾಸ ನೆನಪಿಲ್ಲ. ಸದರಿ ಸಾಲವನ್ನು ನಗದು ರೂಪಾದಲ್ಲಿ ಎರಡು ಬಾರಿ ಕೊಟ್ಟಿರುತ್ತೇನೆ. ಈ ರೀತಿ ಎರಡು ಬಾರಿ ಕೊಟ್ಟಿದ್ದೇನೆ ಎಂದು ಪ್ರಮಾಣಪತ್ರದಲ್ಲಿ ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನನಗೆ ನಾಲ್ಕು ಬ್ಯಾಂಕಗಳಲ್ಲಿ ಖಾತೆಗಳು ಇವೆ. ನಾನು ಆದಾಯ ತೆರಿಗೆ ಪಾವತಿದಾರ. ಈ ಕುರಿತು ದಾಖಲೆ ಹಾಜರುಪಡಿಸಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅವಶ್ಯವಿದ್ದರೆ ಪಡಿಸುತ್ತೇನೆ ಎಂದು ಉತ್ತರಿಸುತ್ತಾರೆ. ಸಾಕ್ಷಿದಾರರ ಸಮಕ್ಷಮ ಸಾಲವನ್ನು ಕೊಟ್ಟಿರುವ ಕುರಿತು ಬರೆದಿದ್ದು ಇದ್ದು, ಸದರಿ ಸಾಕ್ಷಿದಾರರು ಯಾರು ಎಂದು ನಾನು ಉಲ್ಲೇಖ ಮಾಡಿಲ್ಲ ಎಂದರೆ ನಿಜ. ಸಾಕ್ಷಿದಾರರು ಎಂದರೆ ನನ್ನ ತಾಯಿ ಮತ್ತು ತಮ್ಮ. ಅವರ ಸಮಕ್ಷಮ ನಾನು ಹಣ ಕೊಟ್ಟಿರುತ್ತೇನೆ. ಕೊಟ್ಟಿರುವ ಸಾಲವನ್ನು ಯಾವಾಗ ಮರುಪಾವತಿಗೆ ಬೇಡಿಕೆ ಇಟ್ಟಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ರಮಜಾನ ಆದ ನಂತರ ಒಂದು ತಿಂಗಳಲ್ಲಿ ಮತ್ತು 2019 ನೇ ಇಸ್ವಿಯಲ್ಲಿ ಸಹ ಬೇಡಿಕೆ ಇಟ್ಟಿದ್ದೇನೆ, ಆದರೆ ಅವರು ಕೊಡಲಿಲ್ಲ.

ಆರೋಪಿತರು ನನಗೆ ಎಕ್ಸಿಸ ಬ್ಯಾಂಕ ಚೆಕ್ಕ ಕೊಟ್ಟಿರಬಹುದು. ನಿ.ಪಿ.1 ರಲ್ಲಿರುವ ಬರವಣಿಗೆ ಮತ್ತು ಸಹಿಯ ಮಸಿಗೆ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ಚೆಕ್ಕ ಮೇಲೆ ಆರೋಪಿತರ ಸಹಿಯನ್ನು ನಾನೇ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಲದ ಕುರಿತು ನಾನು ಯಾವುದೇ ರೀತಿ ಕರಾರು ಮಾಡಿಕೊಂಡಿಲ್ಲ.

ಆರೋಪಿತರಿಗೆ ಎರಡು ಬಾರಿ ನೋಟೀಸು ಕಳಿಸಿದ್ದು, ಸದರಿಯವರು ನೋಟೀಸು ಪಡೆದುಕೊಂಡಿಲ್ಲ. ನನ್ನ ತಮ್ಮ ಆರೋಪಿತರಿಂದ ತೆಗೆದುಕೊಂಡ ಚೆಕ್ಕ ನನಗೆ ಕೊಟ್ಟಿದ್ದು, ಅದನ್ನು ನಾನು ದುರುಪಯೋಗ ಮಾಡಿಕೊಂಡು ಪ್ರಸ್ತುತ ಪ್ರಕರಣ ಹೂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಯಾವುದೇ ಹಣವನ್ನು ನೀಡದೆ ಇದ್ದರೂ ಅವರಿಗೆ ತೊಂದರೆ ಕೊಡುವ ದುರುದ್ದೇಶದಿಂದ ಅವರ ಖಾಲಿ ಚೆಕ್ಕನಲ್ಲಿ ನಾನೇ ಸಹಿ ಮಾಡಿ ದುರುಪಯೋಗ ಮಾಡಿಕೊಂಡು ಈ ರೀತಿ ಸುಳ್ಳು ಪ್ರಕರಣ ಹೂಡಿದ್ದೇನೆ ಎಂದರೆ ಸರಿಯಲ್ಲ.

***ಮರು ವಿಚಾರಣೆ: ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.